ಅಂಜನಪುರ ಜಲಾಶಯದ ಕಾಮಗಾರಿ

1377 (1966) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಜನಾಪುರ ಜಲಾಶಯ ಕಾಮಗಾರಿಗೆ ಮಂಜೂರಾದ ಹಣವೆಷ್ಟು; ಖರ್ಚಾದ ಹಣವೆಷ್ಟು;

ಆ) ಹೆಚ್ಚುವರಿಯಾಗಿ ಮಂಜೂರಾದ ಹಣವೆಷ್ಟು?

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಮೂಲ ಅಂದಾಜು ಮೊತ್ತ ರೂ. 835.00 ಲಕ್ಷ ಇದುವರೆಗೆ ರೂ. 751.34 ಲಕ್ಷಗಳು ಖರ್ಚಾಗಿರುತ್ತದೆ.

ಆ) ಹೆಚ್ಚುವರಿ ಹಣ ಮಂಜೂರಾಗಿರುವುದಿಲ್ಲ.

ಬೆಂಗಳೂರು ನಗರದಲ್ಲಿ ಪೇ ಆ್ಯಂಡ್ ಪಾರ್ಕ ಯೋಜನೆಯಡಿ ಟೆಂಡರ್ ಕರೆದಿರುವ ವಿವರ

1378 (1650) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೇ ಅಂಡ್ ಪಾರ್ಕ್ ಯೋಜನೆಯಡಿಯಲ್ಲಿ ನೀಡಿರುವ ಟೆಂಡರ್ ಮೊತ್ತವೆಷ್ಟು? (ವಿವರಗಳನ್ನು ನೀಡುವುದು) ;

ಆ) ಟೆಂಡರ್ ನಿಯಮ ಉಲ್ಲಂಘಿಸಿದ ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ?

ಇ) ಪಾಲಿಕೆಯ ಉಪ ಆಯುಕ್ತರಿಗೆ ಹೊಸ ರಸ್ತೆಗಳ ಗುತ್ತಿಗೆಯನ್ನು ನೀಡಲು ಅಧಿಕಾರವಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಪಾವತಿ ಮತ್ತು ನಿಲುಗಡೆ ಯೋಜನೆಯನ್ನು ಅನುಷ್ಠಾನಕ್ಕೆ ತಂದಾಗಿನಿಂದ ಈ ಕೆಳಗೆ ಸೂಚಿಸಿದಂತೆ ಆದಾಯವನ್ನು ಪಾಲಿಕೆಯು ಸ್ವೀಕರಿಸಿದೆ:

1.	ನವೆಂಬರ್ 2000ರಿಂದ 31.3.2001ರವರೆಗೆ	:ರೂ. 86,33,324-00
2.	ದಿನಾಂಕ: 1.4.2001 ರಿಂದ 31.4.2002ರವೆಗೆ	:ರೂ. 2,16,73,247-00
3.	ದಿನಾಂಕ:1.4.2002ರಿಂದ 31.3.2003 ರವರೆಗೆ	:ರೂ. 3,47,21,480-00
	ಒಟ್ಟು	:ರೂ.6,50,28,051-00

ಆ) 1. 9 ಜನ ಗುತ್ತಿಗೆದಾರರಿಗೆ ದಂಡ ವಿಧಿಸಿ ಶುಲ್ಕ ವಸೂಲಿ ಮಾಡಲಾಗಿದೆ.

2. ಒಬ್ಬ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ.

3. ಸಾರ್ವಜನಿಕರಿಗೆ ವಂಚನೆ ಆರೋಪದ ಮೇಲೆ ಐ.ಪಿ.ಸಿ. ಸೆಕ್ಷನ್ 420 ರಡಿಯಲ್ಲಿ ದೂರು ದಾಖಲು ಮಾಡಿ 3 ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಲಾಗಿದೆ.

4. ಟೆಂಡರು ನಿಯಮಗಳ ಉಲ್ಲಂಘನೆಗಾಗಿ 26 ಗುತ್ತಿಗೆದಾರರ ಇ.ಎಂ.ಡಿ. ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.